ಪಕ್ಷದವರ ಹಾಗೂ ಇಡೀ ಕರ್ನಾಟಕ ಜನತೆಯ ಕಾಳಜಿ ಇದೆ. ಇದು 3 ತಿಂಗಳಿಂದ ನಡೆಯುತ್ತಿದೆ, ಈ ಬಗ್ಗೆ ಏನಾಗಿದೆ ಎನ್ನತಕ್ಕಂಥಾದನ್ನು ಇವತ್ತು ನಾವು ಪ್ರಶ್ನೆ ಮಾಡಬೇಕಾಗಿದೆ. ಹಾಗಾಗಿ ಇವತ್ತು ನಾವು ನಮ್ಮ ಚೌಕಟ್ಟಿನೊಳ್ಗೆ ಮಾತನಾಡುವುದಕ್ಕೆ ತಯಾರಿರುವಂತಹ ಸಂದರ್ಭದಲ್ಲಿ, ಮುಖ್ಯ ಕೇಂದ್ರಬಿಂದುವಿಗೆ ಧಕ್ಕೆಯಾಗುವಂತಹ ರೀತಿಯಲ್ಲಿ ಮಾತನಾಡದಿರುವುದಕ್ಕೆ ತಯಾರಿಲ್ಲದಿರುವ ಸಂದರ್ಭದಲ್ಲಿ ಇದು ಬಹಳ ಮಹತ್ವವಾದ ವಿಚಾರವಾಗಿರುವುದರಿಂದ ಇವತ್ತು ವಿಧಾನಮಂಡಲದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ.

ಡಾ।।ರಾಜ್‌ಕುಮಾರ್ ಅವರ ಅಪಹರಣದ ವಿಷಯದಲ್ಲಿ ಏನು ಪ್ರಸ್ತಾಪ ಆಗುತ್ತಿದೆ, ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದು ಕಾತರದಿಂದ ಜನ ನೋಡುತ್ತಿದ್ದಾರೆ. ಮಾನ್ಯ ಖರ್ಗೆಯವರು ಇದಕ್ಕೆ ಒಂದು ದಿನಾಂಕವನ್ನು ನಿಗದಿ ಮಾಡಬೇಕು ಎಂದು ಹೇಳಿದರು. ಇವತ್ತು ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಎಲ್ಲ ವಿಷಯಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ಈ ದಿವಸಕ್ಕೆ ತೆಗೆದುಕೊಳ್ಳುವಂಥಾದ್ದು ಆಗಬೇಕು. ಅದರ ಸಲುವಾಗಿ ಒಂದು ಮೀಟಿಂಗ್, ಅದರ ಸಲುವಾಗಿ ಒಂದು ವಿಚಾರ ಮಾಡುವಂಥಾದ್ದೂ ಏನಿದೆ ಅದರ ಅವಶ್ಯಕತೆ ಇಲ್ಲ. ಮಾನ್ಯ ಅಧ್ಯಕ್ಷರಾದ ತಾವು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವಂಥಾದ್ದೂ ಇದೆ. ಎಲ್ಲ ವಿಷಯಗಳನ್ನು ಬದಿಗೊತ್ತಿ ತಾವು ನಿರ್ಣಯ ತೆಗೆದುಕೊಳ್ಳುವಂಥಾದ್ದು ಆಗಬೇಕು. ಆದ್ದರಿಂದ ಇದರಿಂದ ತಾವು ತಕ್ಷಣ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(2) ಮಳೆ ಹಾನಿಯಿಂದ ಆಗಿರತ್ತಕ್ಕ ಕೊಂದರೆ ಕುರಿತು:-

+ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದರಲ್ಲಿ ಅರ್ಥ ಇದೆ. ಇದು ಮಹತ್ವದ ವಿಷಯ ಅಲ್ಲ ಎಂದು ನಾವು ಹೇಳತಕ್ಕದ್ದು ಅಲ್ಲ. ಮತ್ತು ಈ ರಾಜ್ಯ ದ ಜನತೆಯ ನಿರೀಕ್ಷೆ ಸಹ ಇದೆ. ಆದರೆ ಇವತ್ತು ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೆಕಾದ ಅವಶ್ಯಕತೆ ಇಲ್ಲವೆಂದು ನನ್ನ ಭಾವನೆ. ಆ ರೀತಿ ತೆಗೆದುಕೊಳ್ಳುವುದಾದಾರೆ ಇವತ್ತು ಜನಸಾಮಾನ್ಯರಿಗೆ ಮತ್ತು ರೈತವರ್ಗಕ್ಕೆ, ಗ್ರಾಮಾಂತರ ಜನಕ್ಕೆ ಬಹಳ ಅನಾನುಕೂಲ ಆಗಿರತಕ್ಕಂಥಾದ್ದು, ಮಳೆಹಾನಿಯಿಂದ ನೂರಾರು ಕೋಟಿ ರೂಪಾಯಿಗಳಷ್ಟು ಹಾನಿಯಾಗಿರತಕ್ಕದ್ದು, ರಸ್ತೆಗಳು ಕೊಚ್ಚಿಕೊಂಡು ಹೋಗಿರತಕ್ಕಂಥಾದ್ದು ಇದೆ. ಆ ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಾರ್ವಜನಿಕ ಆಸ್ತಿ ನಷ್ಟವಾಗಿದೆ ಎಂಬುದನ್ನು ಕೂಡ ನಾವು ಗಮನಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಏನು ಹೇಳುತ್ತಿದ್ದರೆ ಅದನ್ನು ಪ್ರಶ್ನೋತ್ತರ ವೇಳೆ ಆದನಂತರ ತೆಗೆದುಕೊಳ್ಳತಕ್ಕದ್ದು ಸೂಕ್ತ ಇದೆ. ಮತ್ತೆ ನಾವು ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ಕೂಡ ಮಾನ್ಯ ಗೃಹ ಮಂತ್ರಿಗಳು ಕೆಲವು ಇತಿಮಿತಿಗಳಲ್ಲಿ ನಾವು ಮಾತನಾಡತಕ್ಕಂತಹ ಸಂದರ್ಭದಲ್ಲಿ ಕೂಡ ಮಾನ್ಯ ಗೃಹ ಮಂತ್ರಿಗಳು ಕೆಲವು ಇತಿಮಿತಿಗಳಲ್ಲಿ ನಾವು ಮಾತನಾಡತಕ್ಕಂಥ ಅವಶ್ಯಕತೆ ಇದೆಯೆಂದು ಹೇಳಿದ್ದಾರೆ. ಯಾವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಡಾ।। ರಾಜ್‌ಕುಮಾರ್ ಅವರು ಸುರಕ್ಷಿತವಾಗಿ ಅಲ್ಲಿಂದ ವಾಪಸ್ಸು ಬರಬೇಕು. ಇದೊಂದೇ ಗುರಿ ನಮ್ಮಲ್ಲರದ್ದೂ ಆಗಿರತಕ್ಕದ್ದು. ಮಾನ್ಯ ವಿರೋಧಪಕ್ಷದ ನಾಯಕರ ಗುರಿ ಕೂಡ

ಇದೇ ಆಗಿದೆ. ಇಡೀ ರಾಜ್ಯ ಜನತೆಯ ಗುರಿ ಇರತಕ್ಕದ್ದು ಕೂಡ ಇದೇ ಆಗಿದೆ. ಆದ್ದರಿಂದ ಆ ಇತಿಮಿತಿಯಲ್ಲಿ ನಾವು ಇಲ್ಲಿ ಚರ್ಚೆ ಮಾಡ ಬೇಕಾಗುತ್ತದೆ. ಇದಕ್ಕೆ ಇಲ್ಲಿ ನೇರವಾಗಿ ಕೇಳುವುದಕ್ಕೆ ಸಾಧ್ಯವಿಲ್ಲದಿದ್ದರೆ ತಾವು ತಮ್ಮ ಕೊಠಡಿಯಲ್ಲಿ ಇದರ ಬಗ್ಗೆ ಸರ್ಕಾರದ ಜತೆ, ನಮ್ಮ ಜತೆ ಚರ್ಚೆ ನಡೆಸಿ ಒಂದು ವೇಳೆಯನ್ನು ನಿಗದಿ ಮಾಡತಕ್ಕದ್ದು ಸೂಕ್ತವಿದೆ ಎಂದು ನನ್ನ ಭಾವನೆ. ಇದಕ್ಕೆ ತಾವು ಮುಂದಾಗಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಗೃಹ ಮಂತ್ರಿಗಳು ಇಲ್ಲಿ ವಿರೋಧಪಕ್ಷದ ನಾಯಕರಾಗಿ ಕುಳಿತಿದ್ದಾಗ ಪದೇ ಪದೇ ಪ್ರಶ್ನೋತ್ತರ ವೇಳೆಯನ್ನು ಮುಂದಕ್ಕೆ ಹಾಕಿಸಿ ಬೇರೆ ಮಹತ್ವ ವಿಚಾರಗಳನ್ನು ತೆಗೆದುಕೊಂಡಿರತಕ್ಕಂಥಾದ್ದೂ ಕೂಡ ನಮ್ಮ ಸದನದ ದಾಖಲೆಗಳಲ್ಲಿ ಇವೆ. ಅದನ್ನು ತಾವು ತೆಗೆಸಿ ನೋಡಬಹುದು. ಇಡೀ ರಾಜ್ಯದ ಜನತೆ ಇದೇ ಭಾವನೆಯಿಂದ ನಿನ್ನೆಯಿಂದ ನಿರೀಕ್ಷೆ ಮಾಡುತ್ತಿದೆ. ನಿನ್ನೆ ಬೇರೆ ಬೇರೆ ವಿಚಾರಗಳು ಇದ್ದವು. ಸಂತಾಪ ಸೂಚನೆ ನಿರ್ಣಯ ಇತ್ತು, ಅದನ್ನು ಮುಗಿಸಿದ್ದೇವೆ. ಆದರೆ ಪ್ರಥಮವಾಗಿ ಸಾರ್ವಜನಿಕವಾಗಿ ಇದನ್ನೇ ತೆಗೆದುಕೊಳ್ಳುತ್ತಾರೆ ಎನ್ನುವಂಥಾದ್ದೂ ಮಾಧ್ಯಮಗಳಲ್ಲಿ ಮತ್ತು ಸಾಮಾನ್ಯ ಜನತೆಯ ಭಾವನೆಯಲ್ಲಿ ಇತ್ತು. ಇಡೀ ರಾಜ್ಯದ ಜನತೆಯ ಭಾವನೆಯನ್ನು ವ್ಯಕ್ತ ಮಾಡುವುದಕ್ಕೆ ಇದು ಒಂದು ವೇದಿಕೆ, ಇಲ್ಲಿ ಚರ್ಚೆ ಮಾಡದೆ ಬೇರೆ ಇನ್ನೆಲ್ಲೋ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅತಿವೃಷ್ಟಿ ಬಗ್ಗೆಯಾಗಲಿ....

ಅಧ್ಯಕ್ಷರು:- ಐದಾರು ಜನ ಮಾನ್ಯ ಸದಸ್ಯರು ಇದರ ಬಗ್ಗೆ ಹೇಳಿದ್ದಾರೆ, ಅವರು ಹೇಳಿದ್ದನ್ನೇ ನೀವು ಏಕೆ ಹೇಳುತ್ತಿದ್ದೀರಿ?

ಶ್ರೀ ಅರಗ ಜ್ಞಾನೇಂದ್ರ :- ತಾವು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕು. ಇದು ತಮಗೆ ಇರತಕ್ಕಂಥ ಹಕ್ಕು.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ಅವಕಾಶ ಕೊಡಿ ಸನ್ಮಾನ್ಯ ಖರ್ಗೆಯವರು ಇದೇ ವೀರಪ್ಪನ್ ವಿಚಾರದಲ್ಲಿ, ಅವರು ವಿರೋಧಪಕ್ಷದ ನಾಯಕರಾಗಿ ಇದ್ದಂಥ ಸಂದರ್ಭದಲ್ಲಿ ಸೆಪ್ಟೆಂಬರ್ 10ನೇ ತಾರೀಖು, 1997 ನೇ ಇಸವಿಯಲ್ಲಿ ಅವರೇ ನಿಲುವಳಿ ಸೂಚನೆಯನ್ನು ತಂದಂಥ ಸಂದರ್ಭದಲ್ಲಿ ಬೇರೆ ಎಲ್ಲ ಕಾರ್ಯಕಲಾಪಗಳನ್ನು ಕೂಡ ಬದಿಗೊತ್ತಿ ವೀರಪ್ಪನ್ ವಿಚಾರವನ್ನು ನಾವು ಚರ್ಚೆಗೆ ತೆಗೆದುಕೊಂಡಿರತಕ್ಕಂಥ ಪ್ರಕರಣ ಇದೆ. ಆದ್ದರಿಂದ ಬೇರೆ ದಿನಾಂಕವನ್ನು ನಿಶ್ಚಯ ಮಾಡಬೇಕಾದ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಎ. ರಾಮದಾಸ್:- ಈ ವಿಷಯದಲ್ಲಿ ದಾಖಲೆ ಇದೆ.

ಅಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ:- ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಪರವಾಗಿ ಮಾನ್ಯ ಭೈರೇಗೌಡರು ಮಾತನಾಡಿದ್ದಾರಲ್ಲ?

ಶ್ರೀ ಕೆ. ಶ್ರೀನಿವಾಸ ಗೌಡ ಕುದುವನಹಳ್ಳಿ :- ನನ್ನ ಅಭಿಪ್ರಾಯವನ್ನು ಸ್ವಲ್ಪ ಹೇಳಿಬಿಡುತ್ತೇನೆ. 86 ದಿನಗಳಿಂದ ಡಾ॥ ರಾಜ್‌ಕುಮಾರ್ ಅವರು ಕಾಡಿನಲ್ಲಿ ಇದ್ದಾರೆ. ಇವತ್ತು ಇವರು ಒಂದು ಗಂಟೆ ಚರ್ಚೆ ಮಾಡಿ ಅವರೇನಾದರೂ ಕಾಡಿನಿಂದ ಬರುವಹಾಗಿದ್ದರೆ ಒಂದು ಗಂಟೆಯಲ್ಲಿ, ಎರಡು ಗಂಟೆ ಚರ್ಚೆಗೆ ಅವಕಾಶ ಕೊಡೋಣ.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಅತೀವ ಗೊಂದಲ- ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು.)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೇ, ಇದು ಏನಾಗಿದೆ ಎಂದರೆ ಅದಕ್ಕೇ ಅವರು ಈ ರೀತಿ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಿ. ಇದರ ಬಗ್ಗೆ ನಾನು ತೀರ್ಮಾನ ಕೊಡುತ್ತೇನೆ. ತಾವು ಹೇಳಿದ್ದು ನನಗೆ ಅರ್ಥವಾಯಿತು. ನನಗೆ ಎಲ್ಲ ಅರ್ಥವಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾಗಿರತಕ್ಕಂಥ ವಿಶ್ವೇಶ್ವರಯ್ಯ ಹೆಗಡೆಯವರು ಹೇಳಿರತಕ್ಕದ್ದು ಕಡತಕ್ಕೆ ಹೋಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಅದು ಅಕಸ್ಮಾತ್ ಹೋಗಿದ್ದರೆ ತಾವು ಅದನ್ನು ತೆಗೆಸಬೇಕು. ಇಲ್ಲದಿದ್ದರೆ ಪ್ರಬಲವಾಗಿ ನಾವು ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ. ಅವರು ಏನು ಹೇಳಿದ್ದಾರೆ ಅದನ್ನು ತೆಗೆದುಕೊಂಡು ಬನ್ನಿ. ಅದನ್ನು ಕಡತದಿಂದ ತೆಗೆಯಬೇಕೇ ಅಥವಾ ಬೇಡವೇ ಎನ್ನುವ ಬಗ್ಗೆ ತೀರ್ಮಾನವನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಾವು ಅನುಭವ ಇರತಕ್ಕವರು, ಸರ್ಕಾರವನ್ನು ನಡೆಸಿರತಕ್ಕವರು ಏನಾದರೂ ಮಾತನಾಡಿದರೆ ಅಧಿಕಾರಿಗಳು ಅಥವಾ ಸಾರ್ವಜನಿಕರು ಇವರ ಈ ಮಾತಿನಲ್ಲಿ ಅರ್ಥವಿದೆ ಅದಕ್ಕೆ ಬೆಲೆ ಇದೆ. ಇವರು ಹೇಳುವುದನ್ನು ಮಾಡುತ್ತಾರೆ ಎಂದು ಸ್ವಲ್ಪವಾದರೂ ನಂಬಿಕೆ ಇರಬೇಕಾಗುತ್ತದೆ. ಇಲ್ಲಿ ನಾವು ಬೇಜವಾಬ್ದಾರಿಯಿಂದ ನಡೆದುಕೊಳ್ಳುವುದಕ್ಕೆ ಅಥವಾ ಮಾತನಾಡುವುದಕ್ಕೆ, ಸದನವನ್ನು ನಮ್ಮ ಕೈಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಸ್ವಾಮಿ. ಅದಕ್ಕೋಸ್ಕರವಾಗಿ ನಾನು ಹೇಳುವುದೇನೆಂದರೆ ಅನುಭವ ಇಲ್ಲದೇ ಇರುವಂಥ ಮಾತುಗಳನ್ನಾಡುವುದು ಸರಿಯಲ್ಲ, ಮತ್ತು ನಮ್ಮ ಆತ್ಮ ಗೌರವಕ್ಕೆ ಚ್ಯುತಿ ಬರತಕ್ಕದ್ದು ಸಹಿತ ಸರಿಯಲ್ಲ. ಇಲ್ಲಿ ನಾವು ಎಲ್ಲರ ಕೈಯಲ್ಲೂ ಮಾತನಾಡಿಸಿಕೊಂಡು ಹೋಗುವಂಥ ನೀಚ ಪ್ರಾಣಿಗಳು ನಾವಲ್ಲ. ಆದ್ದರಿಂದ ತಾವು ನಮ್ಮ ಘನತೆಯನ್ನು...

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು :- ನಾನು ತೀರ್ಮಾನ ಕೊಡುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ:- ಹತ್ತು ಜನ ಎದ್ದು ನಿಂತು ಕೂಗಾಡುವುದರಿಂದ ನಮ್ಮನ್ನು ತಡೆಗಟ್ಟಬಹುದು ಎಂದು ಯಾರಾದರೂ ಭಾವಿಸಿಕೊಂಡಿದ್ದರೆ ಅದನ್ನು ನಮ್ಮ ಕೈಯಲ್ಲಿ ನಾವು ಮಾಡಬಾರದು, ಬೇರೆಯವರು ಕೂಡ ಅದನ್ನು ಮಾಡುವುದಕ್ಕೆ ಆಗುವುದಿಲ್ಲ ನಾವು ಸರ್ವಸ್ವತಂತ್ರವಾಗಿದ್ದೇವೆ. ನಮ್ಮ ಅಭಿಪ್ರಾಯವನ್ನು ನಾವು ಹೇಳುತ್ತೇವೆ. ಡಾ।। ರಾಜ್‌ಕುಮಾರ್‌ಅವರ ಬಿಡುಗಡೆಗೆ ಸಂಬಂಧಪಟ್ಟ ಹಾಗೆ ವೈಫಲ್ಯತೆಗಳು ಕೇಂದ್ರ ಸರ್ಕಾರದ ವೈಫಲ್ಯತೆಗಳು-ಎಲ್ಲವನ್ನೂ ಬಿಡಿ ಬಿಡಿಯಾಗಿ, ಎಳೆ ಎಳೆಯಾಗಿ ಹೇಳತಕ್ಕಂಥ ಕಾಲ ಇದು....

(ಗೊಂದಲ)

ಶ್ರೀ ಪಿ.ಜಿ. ಆರ್. ಸಿಂಧ್ಯ:- ಇದೆಲ್ಲ ನಮಗೆ ಗೊತ್ತಿದೆ . ಮಾನ್ಯ ಅಧ್ಯಕ್ಷರೇ,ನಾನು ಈಲ್ಡ್ ಆಗುವುದಿಲ್ಲ.

ಅಧ್ಯಕ್ಷರು:- ಮಾನ್ಯ ಸಿಂಧ್ಯಾರವರೇ, ದಯಮಾಡಿ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ - ಹಿಂದೆ ಆಡಳಿತ ಮಾಡಿದವರು ನಾವು ಏನೇನು ಮಾಡಿದ್ದೇವೆ ಎಂದು ಹೇಳಬೇಕಾಗುತ್ತದೆ. ದಯಮಾಡಿ ಅದನ್ನು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು:- ಆಮೇಲೆ ತೆಗೆಸುತ್ತೇನೆ. ದಯಮಾಡಿ ತಾವು ಕುಳಿತುಕೊಳ್ಳಬೇಕು. ಈಗ ಮಾನ್ಯ ಸದಸ್ಯರುಗಳಲ್ಲಿ ನನ್ನ ವಿನಂತಿ ಏನೆಂದರೆ, ಈಗ ನಮ್ಮ ಮುಂದೆ ಇರುವುದು ಎರಡು ಪ್ರಶ್ನೆಗಳು. ಒಂದು, ಪ್ರಶ್ನೋತ್ತರ ವೇಳೆಯನ್ನು ಮುಂದಕ್ಕೆ ಹಾಕುವುದು. ಎರಡನೆಯದು ಮಾನ್ಯ ಖರ್ಗೆ ಯವರು ಹೇಳಿದ ಪ್ರಕಾರ ಇದರ ಬಗ್ಗೆ ನಾವು ಕುಳಿತು ಕೊಂಡು ಅರ್ಧಗಂಟೆ ಏಕೆ ಮಾತನಾಡಬಾರದು ಎನ್ನುವುದು. ಈ ಎರಡು ಪ್ರಶ್ನೆ ನಮ್ಮ ಮುಂದೆ ಇರುವುದು. ಆಮೇಲೆ ಇನ್ನೊಂದು ಪ್ರಶ್ನೆ ಏನೆಂದರೆ, ಪ್ರಶ್ನೋತ್ತರ ಕೂಡ ಬಹಳ ಮುಖ್ಯವಾದದ್ದು. ಅದನ್ನು ಸಸ್ಪೆಂಡ್ ಮಾಡುವುದಕ್ಕೆ ಆಗುವುದಿಲ್ಲ. ಅರ್ಧಗಂಟೆಯಲ್ಲಿ ಏನೂ ತೊಂದರೆಯಾಗುವುದಿಲ್ಲವೆಂದು ಕೆಲವರು ಹೇಳಿದ್ದಾರೆ. ಬಹುಶಃ ನಾನು ತಮ್ಮೆಲ್ಲರ ಒಟ್ಟಾರೆ ಅಭಿಪ್ರಾಯ ತೆಗೆದುಕೊಂಡಿದ್ದೇನೆ. ಪ್ರಶ್ನೋತ್ತರ ವೇಳೆಯಾದಮೇಲೆ ನಾನು ಈ ವಿಷಯವನ್ನು ತೆಗೆದುಕೊಳ್ಳುತ್ತೇನೆ. I have no objection. ಅಷ್ಟರೊಳಗೆ ಸರ್ಕಾರದವರು ಅವರನ್ನು ಕರೆಸಿ ಮಾತನಾಡುವುದಿದ್ದರೆ ಮಾತನಾಡಲಿ Otherwise , as soon as the question hour is over, we will take up that one.

ಶ್ರೀ ಜಗದೀಶ ಶೆಟ್ಟರ್:- ಪ್ರಶ್ನೋತ್ತರ ವೇಳೆಯಾದ ತಕ್ಷಣ ಇದನ್ನು ತೆಗೆದು ಕೊಳ್ಳಬೇಕು.

ಅಧ್ಯಕ್ಷರು:- ನಾನು ಖಂಡಿತ ತೆಗೆದುಕೊಳ್ಳುತ್ತೇನೆ. ಇನ್ನು ಇವತ್ತಿನ ಕಾರ್ಯಕ್ರಮದ ಪಟ್ಟಿ ಪ್ರಕಾರ ಮೊದಲನೇ ಪ್ರಶ್ನೆ ಮಾನ್ಯ ಗುರುಸ್ವಾಮಿ ಅವರದ್ದು.